Reg. No. | | | | | | | | |

**BCMKAL 231/BCMKAL 204**

## III Semester B.Com. Degree Examination, April 2021
## (Choice Based Credit System/Credit Based Semester Scheme)
## (2018 – 19 to 2020 – 21) (2020 – 21 Batch Onwards)
### KANNADA LANGUAGE (Paper – III)
### ಕನ್ನಡ ಭಾಷೆ (ಪತ್ರಿಕೆ – III)

Time : 3 Hours Max. Marks : 80

I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ : **(3×8=24)**

1) ದುರ್ಯೋಧನನ ಸ್ವಾಭಿಮಾನ, ಛಲದ ಗುಣಗಳು ರನ್ನನ ಕಾವ್ಯ ಭಾಗದಲ್ಲಿ ಚಿತ್ರಿತವಾದ ಬಗೆಯನ್ನು ವಿವರಿಸಿರಿ.

**ಅಥವಾ**

ರೂಪ ಹಾಸನರ 'ತನ್ನಷ್ಟಕ್ಕೆ' ಕವನದ ಆಶಯವನ್ನು ಪರಿಚಯಿಸಿರಿ.

2) ಅತಿಯಾದ ಆಧುನಿಕತೆ ತಂದ ಆಪತ್ತುಗಳನ್ನು 'ಪರಿಸರ ಮಾಲಿನ್ಯ ಮತ್ತು ಲಿಂಗಪರಿವರ್ತನೆ' ಲೇಖನದ ಹಿನ್ನೆಲೆಯಲ್ಲಿ ವಿಶ್ಲೇಷಿಸಿರಿ.

**ಅಥವಾ**

'ಬದುಕಿನ ಇಬ್ಬದಿಗಳು' ಪ್ರಬಂಧದ ಆಶಯವನ್ನು ವಿವರಿಸಿರಿ.

3) ಸಾವನ್ನು ಗೆದ್ದು ಬಂದ ನಿರೂಪಕಿ ಭಾರತಿಯವರ ಅನುಭವಗಳನ್ನು ವಿಶ್ಲೇಷಿಸಿರಿ.

**ಅಥವಾ**

ಮನುಷ್ಯರಲ್ಲಿ ಬೆಳೆದು ಬಂದ ಕ್ರೌರ್ಯ ನಿರೂಪಕಿಗೆ ಅನುಭವಕ್ಕೆ ಬಂದ ಪ್ರಸಂಗವನ್ನು ವಿವರಿಸಿರಿ.

II. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ : **(3×5=15)**

1) ಪಾಂಡ್ಯ ಅರಸನ ಪತ್ನಿ ಗಂಡನನ್ನು ತೊರೆದು ತವರನ್ನು ಸೇರಲು ಕಾರಣವೇನು ? ವಿವರಿಸಿ.

**ಅಥವಾ**

ಮಂಟೇಸ್ವಾಮಿಯು ಬಸವಣ್ಣನವರ ಭಕ್ತಿಯ ದೃಢತೆಯನ್ನು ಪರೀಕ್ಷಿಸಿದ ಸಂದರ್ಭವನ್ನು ವಿವರಿಸಿರಿ.

2) ಸುಬ್ಬಣ್ಣ–ಸರಸುವಿನ ದಾಂಪತ್ಯ ಜೀವನವು ಮುಗಿಯದ ಕಥೆಯೆನಿಸಿದ ಪರಿಯನ್ನು ನಿರೂಪಿಸಿರಿ.

**ಅಥವಾ**

ಬಳಕೆದಾರರ ವೇದಿಕೆಯ ಯಾವುದಾದರೂ ಎರಡು ಯಶಸ್ವೀ ಹೋರಾಟವನ್ನು ನಿರೂಪಿಸಿರಿ.

3) ಕಿಮೋಥೆರಪಿ ಎಂದರೇನು ? ನಿರೂಪಕಿಯ ಬದುಕಲ್ಲಿ ಈ ಚಿಕಿತ್ಸೆಯ ಪರಿಣಾಮಗಳನ್ನು ವಿವರಿಸಿರಿ.

**ಅಥವಾ**

ನಿರೂಪಕಿ ಆಚರಿಸಿಕೊಂಡ ಸಂಭ್ರಮದ ಹುಟ್ಟುಹಬ್ಬದ ಕ್ಷಣಗಳನ್ನು ವಿವರಿಸಿರಿ.

III. **ಒಂದು** ಪದ್ಯಭಾಗದ ಸಂದರ್ಭ ಸೂಚಿಸಿ ಭಾವಾರ್ಥದೊಂದಿಗೆ ವಿವರಿಸಿರಿ. **(1×5=5)**

1) ಪರಿಣತ ವಯಸರೆಮಿರ್ಕ
ಞ್ಗುರುಡರೆಮೆಮಗಿಂಬುಕೆಯ್ವುದು ಚಿತಂ ನಿನ್ನೀ
ಗುರು ನುಡಿದ ನುಡಿಗೊಡಂಬಡು
ಗುರು ವಚನ ಮಲಂಘನೀಯಮೆಂಬುದು ಮಗನೇ

2) ಬರುವಾಗ ನೀನು ತಂದಿರುವೆ ಏನನ್ನು
ಮರಳುವಾಗ ಏನನ್ನು ತಾನೇ ಒಯ್ಯುವೆ
ನಿನ್ನ ಗಂಟು, ನಿನ್ನ ಮೂಟೆ
ಇಲ್ಲೆ ಇರುವಲ್ಲೆ ಉಳಿವುದು
ಮರಿಮಕ್ಕಳ ಚಿಂತೆ ನಿನಗ್ಯಾಕೆ ?

IV. ಅ) **ಎರಡು** ವಾಕ್ಯಗಳ ಸಂದರ್ಭ ತಿಳಿಸಿ, ಸ್ವಾರಸ್ಯ ಬರೆಯಿರಿ : **(2×4=8)**

1) ಕೋಗಿಲೆ ಕವನವ ನುಲಿಯುತಿದೆ !

2) ಕೆಚ್ಚೆದೆ ತೋರ್ದಳು ರಣ ಪಣದೆ !

3) ಕುಷ್ಟ ಕಾಯಿಲೆ ಇರೋರು ಬರುತಾರೆ

4) ಬಂದಿಲ್ಲ ಅಮ್ಮ, ತಂದಿಲ್ಲ ಅಪ್ಪ, ಕಂಡಿಲ್ಲ ಮಳೆಯುಳುಮೆ.

ಆ) **ಎರಡರ** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ಪ್ರೊ. ಕೆ. ಎಸ್. ನಿಸಾರ್ ಅಹಮದ್

2) ಜಾಗತೀಕರಣ ಮತ್ತು ಜಾನಪದ

3) 'ತಂಗಳನ್ನ' ಶಬ್ದದ ಹಿನ್ನೆಲೆ, ನಿಷ್ಪತ್ತಿ ಮತ್ತು ಅರ್ಥ ಬರೆಯಿರಿ.

4) 'ಅಂಗುಲ' ಶಬ್ದದ ಹಿನ್ನೆಲೆ, ನಿಷ್ಪತ್ತಿ ಮತ್ತು ಅರ್ಥ ಬರೆಯಿರಿ.

ಇ) ಎರಡರ ಕುರಿತು ಟಿಪ್ಪಣಿ ಬರೆಯಿರಿ. (2×4=8)

1) ಭಾರತಿಯವರು ನೇಮಿಸಿಕೊಂಡ ಅಡುಗೆಯವಳು.

2) ಡಾ। ಶ್ರೀನಾಥ್.

3) ಭಾರತಿಯವರ ಕುಟುಂಬದವರ ಸೇವಾಕಾರ್ಯ.

4) ನಿರೂಪಕಿಯ ವಿಗ್.

V. ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿರಿ. (12×1=12)

1) ಅಬ್ಬಕ್ಕರಾಣಿಗೆ ಯಾರೊಂದಿಗೆ ವಿವಾಹ ನಡೆಯಿತು ?

2) ಮಂಟೇಸ್ವಾಮಿಯು ಧರಿಸಿದ ವೇಷ ಯಾವುದು ?

3) ''ಸಮರಾನುಬಂಧಮಂ ಮಾಣ್ಬುದು''– ಕಾವ್ಯಭಾಗವನ್ನು ಯಾವ ಮಹಾಕಾವ್ಯದಿಂದ ಆಯ್ದುಕೊಳ್ಳಲಾಗಿದೆ ?

4) ಅರೆಭಾಷೆಯಲ್ಲಿ ಬರೆದಿರುವ ಸುನೀತ (ಸಾನೆಟ್) ಕವನ ಯಾವುದು ?

5) 'ಕಾದಂಬರಿಯ ಸಾರ್ವಭೌಮ' ಎಂದು ಯಾರನ್ನು ಕರೆಯುತ್ತಾರೆ ?

6) ಯಾವ ದಿನವನ್ನು ವಿಶ್ವ ಪರಿಸರ ದಿನವೆಂದು ಆಚರಿಸಲಾಗುತ್ತದೆ ?

7) 'ಒಡೆಯರಲ್ಲ ಸೇವಕರು' ಇದು ಯಾರು ಬರೆದ ಕೃತಿ ?

8) 'ಪದ ಪದಾರ್ಥಗಳು' ಲೇಖನದ ಭಾಗವನ್ನು ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ ?

9) ಭಾರತಿಯವರಿಗೆ 'ಕಿಮೋಥೆರಪಿ' ನಡೆಸಿದ ಡಾಕ್ಟರ್ ಯಾರು ?

10) ಭಾರತಿಯವರ ಹುಟ್ಟೂರು ಯಾವುದು ?

11) ಸತ್ತರೆ ಸ್ವರ್ಗದಲ್ಲಿ ಸ್ವಾಗತಕ್ಕೆ ಯಾರು ಕಾದಿದ್ದಾರೆಂದು ನಿರೂಪಕಿ ಧೈರ್ಯಗೊಂಡಿದ್ದರು ?

12) ಕ್ಯಾನ್ಸರ್ ರೋಗಿಯೊಬ್ಬನಿಗೆ ಕೊಡಬಹುದಾದ ಅತ್ಯುತ್ತಮ ಗಿಫ್ಟ್ ಯಾವುದು ?

---